**ಓ.ಎಸ್. ನಂಃ 210/2021**

**ಪಿ.ಡಬ್ಲ್ಯೂಃ 1**

**ದಿನಾಂಕ 14.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ಃಶ್ರೀ ಆರ್.ಕೆ ವಕೀಲರಿಂದಃ**

ದಿಃ 09.01.2024 ರ ಮುಖ್ಯ ವಿಚಾರಣೆಯಲ್ಲಿ ವಾದಿಯು ಹಾಜರುಪಡಿಸಿದ್ದ, 6 ಪೋಟೋಗಳಿಗೂ ಒಟ್ಟಾಗಿ ನಿಪಿ.11 ಎಂದು ನಿಶಾನೆ ಸಂಖ್ಯೆ ನೀಡಿದ್ದು, ಪ್ರತಿಯೊಂದು ಪೋಟೋಗಳ ಪ್ರತ್ಯೇಕ ಗುರುತಿಸುವಿಕೆಗಾಗಿ ಸದರಿ ಪೋಟೋಗಳನ್ನು ಪ್ರತ್ಯೇಕವಾಗಿ ನಿಪಿ.12 ರಿಂದ 15 ಎಂದು ಮತ್ತು ಸಿಡಿಯನ್ನು ನಿಪಿ.16 ಎಂದು ನಿಶಾನೆಗೊಳಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃಶ್ರೀ ಪಿ.ಡಿ ವಕೀಲರಿಂದಃ**

5. ದಾವಾ ಆಸ್ತಿ ಮತ್ತು ಪ್ರತಿವಾದಪತ್ರ ಅನುಸೂಚಿ ಆಸ್ತಿಯ ಮಧ್ಯೆ 3 ಅಡಿ ಖಾಲಿ ಜಾಗ ಇರುವ ಬಗ್ಗೆ ಪಂಚಾಯಿತಿ ದಾಖಲೆಗಳು ನನ್ನ ಬಳಿ ಇದ್ದು, ಅದನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ದಾವಾ ಆಸ್ತಿಯ ಕಟ್ಟಡದ ಅನುಮೋದಿತ ನಕಾಶೆ ಮತ್ತು ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಕಟ್ಟಡ ಕಾಮಗಾರಿ ಇನ್ನೂ ಸಹ ಮುಕ್ತಾಯವಾಗದಿರುವ ಕಾರಣ ಅದರ Completion certificate ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6. ನಿಪಿ.11 ರ ಪೋಟೋದಲ್ಲಿ ಹಳದಿ ಬಣ್ಣದಿಂದ ಕಾಣುತ್ತಿರುವ ಮನೆಯು ಪ್ರತಿವಾದಿಯ ಮನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಪ್ರತಿವಾದಿಯ ಮನೆಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ನಿಪಿ.11(ಎ) ಮನೆಯಲ್ಲಿಯೇ ಪ್ರತಿವಾದಿ ವಾಸವಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದ ಅನುಮೋದಿತ ನಕಾಶೆ ಮತ್ತು ಪರವಾನಿಗೆ ಕೊಡುವಂತೆ ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಪ್ರತಿವಾದಿಯು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಗೆ ನನ್ನ ಆಸ್ತಿಗೆ ಸಂಬಂಧಿಸಿದ ವೈಯಕ್ತಿಕ ದಾಖಲೆಗಳನ್ನು ಪ್ರತಿವಾದಿಗೆ ಕೊಡಬಾರದು ಎಂದು ಹೇಳಿ ನಾನು ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

7. ದಾವಾ ಆಸ್ತಿಯು ಅನುಮೋದಿತ ನಕಾಶೆಗೆ ಅನುಗುಣವಾಗಿ ಇದೆ ಎಂದು ಪಂಚಾಯಿತಿಯಿಂದ ದೃಡಿಕರಣ ಪತ್ರವನ್ನು ನೀಡಿದರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ದಾವಾ ಆಸ್ತಿಯು ನನ್ನ ತಂದೆಯವರ ಹೆಸರಿನಲ್ಲಿದ್ದಾಗ ಎಷ್ಟು ವಿಸ್ತೀರ್ಣವಿತ್ತು ಮತ್ತು ನನ್ನ ಹೆಸರಿಗೆ ವರ್ಗಾವಣೆಯಾದಾಗ ಎಷ್ಟು ವಿಸ್ತೀರ್ಣವಾಗಿರುತ್ತದೆ ಎಂದು ತೋರಿಸಲು ಪಂಚಾಯಿತಿಯಿಂದ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿದ್ದಾಗ ಇದ್ದ ವಿಸ್ತೀರ್ಣಕ್ಕೂ ನಾವು ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳುವಾಗ ತೋರಿಸಿದ ವಿಸ್ತೀರ್ಣಕ್ಕೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಹೆಸರಿನಲ್ಲಿದ್ದಾಗ ಇದ್ದ ದಾವಾ ಆಸ್ತಿಯ ವಿಸ್ತೀರ್ಣಕ್ಕೆ ಮತ್ತು ನಿಪಿ.1 ರ ವಿಭಾಗಪತ್ರದಲ್ಲಿ ತೋರಿಸಿರುವ ದಾವಾ ಆಸ್ತಿಯ ವಿಸ್ತೀರ್ಣಕ್ಕೂ ಎಷ್ಟು ವ್ಯತ್ಯಾಸವಿದೆ ಎಂದು ತೋರಿಸಲು ಪಂಚಾಯಿತಿಯಿಂದ ದೃಡಿಕರಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

8. ನನಗೆ ಪ್ರತಿವಾದಪತ್ರ ಅನುಸೂಚಿ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.11 ರಲ್ಲಿ ಕಾಮಗಾರಿ ನಡೆಯುತ್ತಿರುವ ಮನೆಯು ದಾವಾ ಆಸ್ತಿ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ದಾವಾ ಆಸ್ತಿಯನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ನಿಪಿ.11(ಎ) ಪ್ರತಿವಾದಪತ್ರ ಅನುಸೂಚಿ ಆಸ್ತಿ ಮತ್ತು ನಿಪಿ.11(ಬಿ) ದಾವಾ ಆಸ್ತಿಯ ಮಧ್ಯೆ ಇರುವ 3 ಅಡಿ ಅಗಲದ ಗಲ್ಲಿ ಜಾಗವು ಪ್ರತಿವಾದಪತ್ರ ಅನುಸೂಚಿ ಆಸ್ತಿಗೆ ಒಳಪಟ್ಟಿದ್ದು, ಪ್ರತಿವಾದಪತ್ರ ಅನುಸೂಚಿ ಆಸ್ತಿಗೆ ಗಾಳಿ ಮತ್ತು ಬೆಳಕು ಬರುವ ಉದ್ದೇಶದಿಂದ ಪ್ರತಿವಾದಿಯು ಸದರಿ 3 ಅಡಿ ಅಗಲದ ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 3 ಅಡಿ ಅಗಲದ ಜಾಗವನ್ನು ಕಬಳಿಸುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.11(ಎ) ಪ್ರತಿವಾದಪತ್ರ ಅನುಸೂಚಿ ಆಸ್ತಿ ಮತ್ತು ನಿಪಿ.11(ಬಿ) ದಾವಾ ಆಸ್ತಿಯ ಮಧ್ಯೆ ಇರುವ 3 ಅಡಿ ಅಗಲದ ಜಾಗದಲ್ಲಿ ಯಾವುದೇ ಕಟ್ಟಡ ಕಟ್ಟಲು ಅಥವಾ ಪೈಪಲೈನ್ ಅಳವಡಿಸಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ವಿಧವೆಯಾಗಿದ್ದು, ಅವರನ್ನು ಬೆದರಿಸಿ ಪ್ರತಿವಾದಿಗೆ ಸೇರಿದ ಸದರಿ 3 ಅಡಿ ಜಾಗದಲ್ಲಿ ಕಾನೂನು ಬಾಹಿರವಾಗಿ ಪೈಪಲೈನ್ ಅಳವಡಿಸುವ ಉದ್ದೇಶದಿಂದ ನಾನು ಸದರಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು

ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಯಾವುದೇ ತೊಂದರೆ ಕೊಡದಿದ್ದರೂ ಸಹ ಅವರಿಗೆ ಕಿರುಕುಳ ಕೊಡುವ ಉದ್ದೇಶದಿಂದ ನಾನು ಪ್ರತಿವಾದಿಯರ ವಿರುದ್ಧ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**